ರಾಜ್ಯದಲ್ಲಿ ಪ್ರತಿದಿನ ಅವಶ್ಯಕತೆ ಇರುವ ವಿದ್ಯುತ್‌ನ ಪ್ರಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 158 (339)
ಸದಸ್ಯರ ಹೆಸರು : ಶ್ರೀ ಬಚ್ಚೇಗೌಡ ಕೆ.ಪಿ (ಚಿಕ್ಕಬಳ್ಳಾಪುರ)
ಉತ್ತರಿಸುವ ಸಚಿವರು : ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಪ್ರಶ್ನೆಗಳು:–

ಅ) ರಾಜ್ಯದಲ್ಲಿ ಪ್ರತಿದಿನ ಅವಶ್ಯಕತೆ ಇರುವ ವಿದ್ಯುತ್ತಿನ ಪ್ರಮಾಣವೆಷ್ಟು ಹಾಗೂ ಉತ್ಪಾದಿಸುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು?

ಆ) ವಿದ್ಯುತ್‌ನ್ನು ಉತ್ಪಾದಿಸುವ ಮೂಲಗಳಾವವು; ಪ್ರತಿ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ತಿನ ಪ್ರಮಾಣವೆಷ್ಟು? (ಪೂರ್ಣ ಮಾಹಿತಿ ನೀಡುವುದು)

ಇ) ಅವಶ್ಯಕತೆ ಇರುವ ವಿದ್ಯುತ್ ಪ್ರಮಾಣಕ್ಕೂ, ಉತ್ಪಾದಿಸುವ ವಿದ್ಯುತ್ ಪ್ರಮಾಣಕ್ಕೂ ಇರುವ ವ್ಯತ್ಯಾಸವೆಷ್ಟು?

ಈ) ಕೊರತೆಯಿರುವ ವಿದ್ಯುತ್ ಪ್ರಮಾಣವನ್ನು ಯಾವ ಮೂಲಗಳಿಂದ ಪಡೆಯಲಾಗುತ್ತಿದೆ; ಪ್ರತಿ ಯೂನಿಟ್‌ಗೂ ಸರ್ಕಾರ ಭರಿಸುವ ಹಣವೆಷ್ಟು;

ಉ) ಕಳೆದ ಮೂರು ವರ್ಷಗಳಿಂದ ವಿದ್ಯುತ್‌ನ್ನು ಖರೀದಿಸಲು ಸರ್ಕಾರವು ಭರಿಸಿದ ಹಣವೆಷ್ಟು (ವರ್ಷವಾರು ಮಾಹಿತಿ ನೀಡುವುದು)'

ಉತ್ತರಗಳು:–

ಅ) ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನ ಸರಾಸರಿ 175 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಅವಶ್ಯಕತೆ ಇರುತ್ತದೆ. ರಾಜ್ಯದಲ್ಲಿ ಆಂತರಿಕವಾಗಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಹಾಗೂ ಕೇಂದ್ರ ವಿದ್ಯುತ್ ಉತ್ಪಾದನಾ ಸಂಸ್ಥೆಗಳಿಂದ ರಾಜ್ಯದ ಪಾಲು ಸೇರಿದಂತೆ ಒಟ್ಟು 138 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿರುತ್ತದೆ.

ಆ) ಪ್ರಸ್ತುತ, ರಾಜ್ಯದಲ್ಲಿ ವಿವಿಧ ಮೂಲಗಳಿಂದ

ಉತ್ಪಾದನೆಯಾಗುತ್ತಿರುವ ವಿದ್ಯುತ್‌ನ ವಿವರಗಳು ಈ ಕೆಳಕಂಡಂತಿವೆ:–

ಕ್ರ ಸಂ.	ಉತ್ಪದನಾ ಮೂಲ	ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ)
1	ಜಲ ವಿದ್ಯುತ್	41.40
2	ಶಾಖೋತ್ಪನ್ನ	38.60
3.	ಕೇಂದ್ರೀಯ	34.80
4.	ಬೃಹತ್ ಸ್ವತಂತ್ರ ಉತ್ಪಾದಕರು	13.10
5.	ನವೀಕರಿಸಬಹುದಾದ ಇಂಧನ	9.90
	ಒಟ್ಟು	**137.80**
6.	ಖರೀದಿ	23.00
	ಒಟ್ಟು ಮೊತ್ತ	**160.80**

ಇ) ಪ್ರಸ್ತುತ, ರಾಜ್ಯದಲ್ಲಿ ಪ್ರತಿದಿನ ಸರಾಸರಿ 175 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಅವಶ್ಯಕತೆ ಇದ್ದು, ಉತ್ಪಾದಿಸಲಾದ ವಿದ್ಯುತ್ ಪ್ರಮಾಣವು 138 ದಶಲಕ್ಷ ಯೂನಿಟ್‌ಗಳಾಗಿದ್ದು, ಒಟ್ಟು 37 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ ವ್ಯತ್ಯಾಸ ಇರುತ್ತದೆ.

ಈ) ಕೊರತೆಯಿರುವ ವಿದ್ಯುತ್ ಪ್ರಮಾಣವನ್ನು ಸರಿದೂಗಿಸಲು ಖಾಸಗಿ ಸಂಸ್ಥೆಗಳಿಂದ ವಿದ್ಯುತ್‌ನ್ನು ಖರೀದಿಸಲಾಗುತ್ತಿದ್ದು, ಖರೀದಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಊ) ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್ತಿನ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ	ವರ್ಷ	ಖರೀದಿಸಿದ ವಿದ್ಯುತ್‌ನ ಪ್ರಮಾಣ (ಮಿ.ಯೂ.ಗಳಲ್ಲಿ)	ಖರೀದಿ ವೆಚ್ಚ (ರೂ. ಕೋಟಿಗಳಲ್ಲಿ)
1.	2008–09	1963.49	1327.43
2.	2009–10	1798.64	1041.06
3.	2010–11	7815.36	3898.30
4.	2011–12 (ಡಿಸೆಂಬರ್–11ರ ಅಂತ್ಯದವರೆಗೆ)	3862.41	1852.22

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡ ಕೆ.ಪಿ.ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 158 (339) ಕ್ಕೆ ಅನುಬಂಧ

ರಾಜ್ಯದಲ್ಲಿ ಖಾಸಗಿ ಮೂಲಗಳಿಂದ ಖರೀದಿಸಲಾಗುತ್ತಿರುವ ವಿದ್ಯುತ್‌ನ ಪ್ರಮಾಣ ಹಾಗೂ ಖರೀದಿ ದರಗಳ ವಿವರಗಳು

ಕ್ರ. ಸಂ.	ಖಾಸಗಿ ವಿದ್ಯುತ್ ಉತ್ಪಾದಕರ ಹೆಸರು	ಖರೀದಿಯ ಪ್ರಮಾಣ (ಮೆ.ವ್ಯಾಗಳಲ್ಲಿ)	ಖರೀದಿಯ ಅವಧಿ	ಖರೀದಿ ದರ ಪ್ರತಿ ಯೂನಿಟ್ಟಿಗೆ (ರೂ.ಗಳಲ್ಲಿ)
	ದಿನದ ಎಲ್ಲಾ ಅವಧಿಯಲ್ಲಿನ ಖರೀದಿ (00.00 ಗಂಟೆಯಿಂದ 24.00 ವರೆಗೆ)			
1.	ಮೆ. ಬಿ.ಎಂ.ಎಂ. ಇಸ್ಪಾಟ್ ಲಿ. ಕರ್ನಾಟಕ	30	01.09.2011 ರಿಂದ 15.06.2013	41.10
2.	ಮೆ. ಎನ್.ಇ.ಟಿ.ಎಸ್ (ಛತ್ತೀಸ್‌ಗಢ)	100	01.09.2011 ರಿಂದ 15.06.2013	4.21
3.	ಮೆ. ಜೆ.ಎಸ್.ಡಬ್ಲ್ಯೂ.ಪಿ.ಟಿ.ಸಿ.ಎಲ್. ಕರ್ನಾಟಕ	500	01.09.2011 ರಿಂದ 15.06.2013	4.26
4.	ಮೆ. ಎನ್.ಇ.ಟಿ.ಎಸ್ (ಛತ್ತೀಸ್‌ಗಢ)	150	01.10.2011 ರಿಂದ 15.06.2013	4.39
5.	ಮೆ. ಹರೇಕೃಷ್ಣ ಮೆಟಾಲಿಕ್ಸ್ ಪ್ರೈ.ಲಿ., ಕರ್ನಾಟಕ	10.1	26.11.2011 ರಿಂದ 15.06.2012	5.15
6.	ಮೆ. ಶಾತವಾಹನ ಇಸ್ಪಾಟ್, ಕರ್ನಾಟಕ	20	26.11.2011 ರಿಂದ 15.06.2012	5.28
7.	ಮೆ. ವಿಜಯನಗರ ಶುಗರ್ಸ್, ಕರ್ನಾಟಕ	15	26.11.2011 ರಿಂದ 15.06.2012	5.30
8.	ಮೆ. ಎನ್.ಎಸ್.ಎಲ್. ಶುಗರ್ಸ್, ಕರ್ನಾಟಕ	15	26.11.2011 ರಿಂದ 15.06.2012	5.30
9.	ಮೆ. ಜೆ.ಎಸ್.ಡಬ್ಲ್ಯೂ.ಪಿ.ಟಿ.ಸಿ.ಎಲ್. ಕರ್ನಾಟಕ	150	26.11.2011 ರಿಂದ 15.06.2012	5.30
	ಪೀಕ್ ಅವಧಿಯಲ್ಲಿನ ಖರೀದಿ (ಬೆಳಿಗ್ಗೆ 07.00 ರಿಂದ ಬೆಳಿಗ್ಗೆ 10.00 ರವರೆಗೆ, ಮತ್ತು ಸಂಜೆ 7.00 ರಿಂದ ರಾತ್ರಿ 10.00 ರವರೆಗೆ)			
1	ಮೆ. ಟಾಟಾ ಪವರ್, ಹಿಮಾಚಲ ಪ್ರದೇಶ	300	01.10.2011 ರಿಂದ 15.06.2012	5.81
2.	ಮೆ. ಪಿ.ಟಿ.ಸಿ.ಐ.ಎಲ್. ಹಿಮಾಚಲ ಪ್ರದೇಶ	ಸರಾಸರಿ 80	16.10.2011 ರಿಂದ 31.05.2012	5.876
3.	ಮೆ. ಎನ್.ಇ.ಟಿ.ಎಸ್, ಆಂಧ್ರ ಪ್ರದೇಶ	50	01.10.2011 ರಿಂದ 31.05.2012	7.756
4.	ಮೆ. ಜಿ.ಯು.ವಿ.ಎನ್.ಎಲ್., ಗುಜರಾತ್	500	01.06.2012 ರಿಂದ 15.06.2013	4.51